## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 740/2024

**ಸಾಕ್ಷಿಯನ್ನು ದಿಃ 02.12.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಸರೋಜಮ್ಮ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 5 |
| ಗಂಡನ ಹೆಸರು | ಕುಮಾರ | | |
| ವಯಸ್ಸು | 51 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಬೀಜಗನಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–1 ನನ್ನ ಮಗಳು. ಚಾಸಾ–2 ನನ್ನ ಗಂಡ. ಚಾಸಾ–4 ನನ್ನ ಮಗ. ಚಾಸಾ.5 ನನ್ನ ಸೊಸೆ. ಚಾಸಾ–6 ದೂರದ ಸಂಬಂಧಿ. ಆರೋಪಿತರು ಗೊತ್ತು. ಅವರು ನನ್ನ ಮಗಳಾದ ಚಾಸಾ–1 ರವರ ಗಂಡ ಮತ್ತು ಆತನ ಸಂಬಂಧಿಕರು. 2012ರಲ್ಲಿ ಚಾಸಾ–1 ರವರ ಮದುವೆ 1ನೇ ಆರೋಪಿಯೊಂದಿಗೆ ಹುಣಸೂರಿನ ಮಂಜುನಾಥ ದೇವಸ್ಥಾನದಲ್ಲಿ ಮದುವೆಯಾಗಿತ್ತು. ನಾನು ಮದುವೆಗೆ ಹೋಗಿರಲಿಲ್ಲ. ನನ್ನ ಮಗಳು ಕಾಲೇಜಿಗೆ ಹೋಗುವಾಗ ಅಪಹರಣ ಮಾಡಿ ಮದುವೆಯಾಗಿದ್ದರು. ಅದಕ್ಕೆ ನಮ್ಮ ಒಪ್ಪಿಗೆ ಇರಲ್ಲಿಲ್ಲ. ಮದುವೆಯಾದ ನಂತರ 6 ವರ್ಷ ಚೆನ್ನಾಗಿದ್ದರು. ನಂತರ ಚಾಸಾ–1 ಮತ್ತು 1ನೇ ಆರೋಪಿಯ ಮಧ್ಯೆ ಜಗಳವಾಯಿತು. ಕಾರಣ ಗೊತ್ತಾಗಲಿಲ್ಲ. 2022ರ ಗಣೇಶನ ಹಬ್ಬ ಬಂತು. ನನ್ನ ಗಂಡ ಚಾಸಾ–1 ಮತ್ತು 1ನೇ ಆರೋಪಿಯನ್ನು ಹಬಕ್ಕೆ ಬನ್ನಿ ಎಂದು ಕರೆದು ಬೆಂಗಳೂರಿಗೆ ಹೋದರು. ಅನಂತರ ಗೌರಿ ಹಬ್ಬಕ್ಕೆ ಬರಲಿಲ್ಲ ಎಂದು ನನ್ನ ಮಗ ಕರೆಯಲು ಹೋದಾಗ ಬರುತ್ತೇನೆ ಎಂದು ಹೇಳಿ ಕಳುಹಿಸಿದರು. ನಂತರ 10 ನಿಮಿಷಕ್ಕೆ ಚಾಸಾ–1 ರವರು ಆತ್ಮಹತ್ಯೆಗೆ ಪ್ರಯತ್ನಿಸಿದರು. ಅಕ್ಕ–ಪಕ್ಕದವರೆಲ್ಲಾ ಅಲ್ಲಿ ಗಲಾಟೆ ನಡೆಯುತ್ತಿದೆ ಎಂದು ಹೇಳಿದಾಗ ನಾನು ಮತ್ತು ಚಾಸಾ–4 ರವರು ಹೋದೆವು. ಆಗ ನಿಮ್ಮನ್ನು ಯಾರು ಕರೆದರು ಎಂದು 1ನೇ ಆರೋಪಿ ನನಗೂ ಮತ್ತು ಚಾಸಾ–4 ರವರಿಗೂ ಹೊಡೆದರು. ಚಾಸಾ–1 ರವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಈ ಬಗ್ಗೆ ಠಾಣೆಯಲ್ಲಿ ಪ್ರಕರಣ

ದಾಖಲಾಯಿತು. ಠಾಣೆಯಲ್ಲಿ ಮುಚ್ಚಳಿಕೆ ಬರೆದುಕೊಟ್ಟು ಕರೆದುಕೊಂಡು ಹೋಗುತ್ತೇನ ಎಂದು ಹೇಳಿದರು. ನಂತರ ಕರೆದುಕೊಂಡು ಹೋಗಲಿಲ್ಲ. 2022ರಲ್ಲಿ ನಾನು ಮಗುವನ್ನು ಹೊರಗೆ ಕರೆದುಕೊಂಡು ಹೋಗಿದ್ದಕ್ಕೆ 1ನೇ ಆರೋಪಿ ಚಾಸಾ-1 ರವರಿಗೆ ಚಪ್ಪಲಿಯಿಂದ ಹೊಡೆದು ಗಲಾಟೆ ಮಾಡಿದ್ದ. ಈ ಬಗ್ಗೆ ಚಾಸಾ-1 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ದಾಖಲಿಸಿದೆವು. ಆಗಲೂ ಕೂಡ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ಅಲ್ಲಿ ಕೂಡ ಕರೆದುಕೊಂಡು ಹೋಗುವಂತೆ ಹೇಳಿದಾಗ ಚಿಕಿತ್ಸೆ ಪಡೆದುಕೊಂಡು ಬಾ ಎಂದು ಹೇಳಿದರು. ನಾವೇ ಚಿಕಿತ್ಸೆ ಕೊಡಿಸಿದೆವು. ನಂತರ ಮಗುವಿನೊಂದಿಗೆ ಚಾಸಾ-1 ರವರು ಗಂಡನ ಮನೆಗೆ ಹೋದಾಗ ಮಗು ಬರಲಿ ನೀನು ಬರಬೇಡ ಎಂದು ಆರೋಪಿತರು ಹೇಳಿದರು. 2 ರಿಂದ 5ನೇ ಆರೋಪಿತರು ಕೂಡ ಗಲಾಟೆಯ ಸಮಯದಲ್ಲಿ ಬಿಡಿಸಲು ಪ್ರಯತ್ನಿಸಲಿಲ್ಲ. ಇಷ್ಟಕ್ಕೆಲ್ಲಾ ನೀನೆ ಕಾರಣ ಎಂದು ನನ್ನನ್ನು ದೂಷಿಸಿದರು. ಅಲ್ಲಿಯವರೆಗೂ ನಾನು ಅವರ ಮನೆಗೆ ಹೋಗಿರಲಿಲ್ಲ. ಬೇರೆ ಕಡೆ ಮದುವೆಯಾಗಿದ್ದರೆ ನನಗೆ ಏನಾದರೂ ಸಿಗುತ್ತಿತ್ತು ನಿನ್ನನ್ನು ಮದುವೆಯಾಗಿ ಏನು ಸಿಗಲಿಲ್ಲ ಎಂದು ತನಗೆ ಕಿರುಕುಳ ನೀಡುತ್ತಿರುವುದಾಗಿ ಚಾಸಾ-1 ರವರು ಆಗಾಗ್ಗೆ ಬಂದು ನನ್ನ ಬಳಿ ಹೇಳುತ್ತಿದ್ದರು. 1ನೇ ಆರೋಪಿ ಗಲಾಟೆ ಮಾಡುತ್ತಿದ್ದರು ಎಂದು ಚಾಸಾ-1 ಹೇಳುತ್ತಿದ್ದರು. ಅಲ್ಲದೇ ಇನ್ನೊಂದು ಬಾರಿ ಚಾಸಾ-1 ಗಂಡನ ಮನೆಗೆ ಹೋದಾಗ 2 ಮತ್ತು 3ನೇ ಆರೋಪಿತರು ಮನೆಯ ಒಳಗೆ ಬಿಡಲಿಲ್ಲ ಎಂದು ಚಾಸಾ-1ರವರು ಹೇಳಿದರು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಮದುವೆಯಾಗಿ 6 ವರ್ಷಗಳ ನಂತರ 1ನೇ ಆರೋಪಿ ಬೇರೆ ಹೆಂಗಸನ ಜೊತೆ ಅನೈತಿಕ ಸಂಬಂಧ ಹೊಂದಿ ಆದೇ ಕಾರಣದಿಂದ ಚಾಸಾ-1 ರವರಿಗೆ ಪ್ರೀತಿಸಿ ಮದುವೆಯಾಗಿರುವವಳು, ಯಾವುದೇ ವರದಕ್ಷಿಣೆ ತಂದಿರುವುದಿಲ್ಲ, ಗತಿ ಇಲ್ಲದವಳು

ಎಂದು ಆರೋಪಿತರೆಲ್ಲರೂ ಚಾಸಾ-1 ರವರಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ಕಿರುಕುಳ ನೀಡುತ್ತಿದ್ದರು ಎಂದರೆ ಸರಿ. ಚಾಸಾ-1 ರವರು ಈ ಬಗ್ಗೆ ನನ್ನ ಬಳಿ ಹೇಳಿದಾಗ ನಾನು ಆಕೆಗೆ ಸಮಾಧಾನಪಡಿಸಿ ನೀನೇ ಅನುಸರಿಸಿಕೊಂಡು ಹೋಗು ಎಂದು ಬುದ್ದಿ ಹೇಳಿ ಕಳುಹಿಸಿದ್ದೆ ಎಂದರೆ ಸರಿ.

ದಿಃ 26.01.2023ರಂದು ನಾವು ಮನೆಯಲ್ಲಿದ್ದಾಗ ಸಂಜೆ 7.30 ಗಂಟೆಗೆ 1ನೇ ಆರೋಪಿ ನಮ್ಮ ಮನೆಯ ಬಳಿ ಬಂದು ಏಕಾ ಏಕಿ ಚಾಸಾ-1 ರವರ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಮುಖ ಮತ್ತು ಮೈಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ಆಗ ಚಾಸಾ-5 ಮತ್ತು 6 ರವರು ಜಗಳ ಬಿಡಿಸಿದರು ಎಂದರೆ ಸರಿ. 2023 ನವೆಂಬರ್ ನಲ್ಲಿ ಚಾಸಾ-1 ರವರು ಮಗುವಿನ ಜೊತೆ ಗಂಡನ ಮನೆಗೆ ಹೋದಾಗ ಆರೋಪಿತರೆಲ್ಲರೂ ಚಾಸಾ-1 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನೀನು ಯಾವುದೇ ವರದಕ್ಷಿಣೆ ತಂದಿಲ್ಲ, ಮನೆಗೆ ಸೇರಿಸುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು, ಆದ್ದರಿಂದ ಚಾಸಾ-1 ರವರು ನಮ್ಮ ಮನೆಗೆ ವಾಪಸ್ಸು ಬಂದರು ಎಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ. JSA ವಕೀಲರಿಂದಃ**

ಪೋಲಿಸರು ಬರೆದುಕೊಂಡ ಹೇಳಿಕೆಗೆ ನಾನು ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿ. ಅದರಲ್ಲಿ ಏನು ಬರೆದಿದೆ ಎಂದು ನಾನು ಓದಿಲ್ಲ. ಚಾಸಾ-1 ರವರು 1ನೇ ಆರೋಪಿಯನ್ನು ಪ್ರೀತಿಸಿ ಮದುವೆಯಾಗಿದ್ದಾರೆ. ಆ ಮದುವೆ ನನಗೆ ಚಾಸಾ-2 ರವರಿಗೆ ಒಪ್ಪಿಗೆ ಇರಲಿಲ್ಲ. ಆ ಮದುವೆಗೆ ನಾವು ಯಾರು ಹೋಗಿರಲಿಲ್ಲ. ಅಪಹರಣ ಮಾಡಿಕೊಂಡು ಹೋದ ಬಗ್ಗೆ ದೂರು ಕೊಟ್ಟಿದ್ದಿರಾ ಎಂದರೆ ಕೊಟ್ಟಿದ್ದೇವೆ ಆ ಬಗ್ಗೆ ದಾಖಲೆ ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇರಲಿಲ್ಲ. ಚಾಸಾ-1 ರವರಿಗೆ ಇಬ್ಬರು ಮಕ್ಕಳು. ಹೆಣ್ಣು ಮಗುವಿಗೆ 12 ವರ್ಷ. ಗಂಡು ಮಗುವಿಗೆ 6 ವರ್ಷ. ಅವರಿಬ್ಬರ ಪಾಲನೆ ಪೋಷಣೆಯನ್ನು 1ನೇ ಆರೋಪಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ನಾವು ನೋಡಿಕೊಳ್ಳುತ್ತಿದ್ದೇವೆ. ಕಳೆದ 3 ವರ್ಷಗಳಿಂದ ಚಾಸಾ-1 ಮತ್ತು ಮಕ್ಕಳನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ. ಈಗ ಒಂದು ವರ್ಷದಿಂದ ಮಕ್ಕಳ ಶಿಕ್ಷಣಕ್ಕಾಗಿ ನಾವೇ ಖರ್ಚು ಮಾಡುತ್ತಿದ್ದೇವೆ ಅದಕ್ಕೂ ಮೊದಲು 1ನೇ ಆರೋಪಿ ಮಾಡುತ್ತಿದ್ದರು. ಚಾಸಾ-1 ರವರಿಗೆ

ಮದುವೆಯಾದ 4 ವರ್ಷಗಳ ನಂತರದಿಂದ ನಾವು ಮಾತನಾಡಲು ಪ್ರಾರಂಭಿಸಿದೆವು. ಅಲ್ಲಿಯವರೆಗೂ 1ನೇ ಆರೋಪಿಯೇ ಮಕ್ಕಳ ಪಾಲನೆ ಪೋಷಣೆಯನ್ನು ಮಾಡುತ್ತಿದ್ದರು. ಆರೋಪಿತರು ಚಾಸಾ-1 ಮತ್ತು ಮಕ್ಕಳನ್ನು ಇಲ್ಲಿಯವರೆಗೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದರೂ ಸಹ ಇತ್ತಿಚೆಗೆ ಒಂದು ವರ್ಷದಿಂದ ನಾವು ಚಾಸಾ-1 ರವರಿಗೆ ಇಲ್ಲ-ಸಲ್ಲದ ಚಿತಾವಣೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 1ನೇ ಆರೋಪಿಯನ್ನು ಬೇರೆ ಮನೆಯಲ್ಲಿ ಇರಸಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2022ರಲ್ಲಿ ಚಾಸಾ-1 ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಲಾಗಿದೆ. ಚಾಸಾ-1 ರವರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರು ಎಂದು ಆರೋಪಿತರಿಗೆ ತೊಂದರೆ ಕೊಡಬೇಕೆಂಬ ಕಾರಣಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ಮದುವೆಯಾದಾಗಿನಿಂದಲೂ ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ಕಿರುಕುಳ ನೀಡಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇವೆ. ನಾನು ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ಪೋಲೀಸ್ ಠಾಣೆಯಲ್ಲಿ ಮುಚ್ಚಳಿಕೆ ಬರೆದುಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 26.01.2023ರಂದು ಜಗಳವಾದಾಗ ಊರಿನ ಯಜಮಾನರು ಇದ್ದರು. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-1 ರವರನ್ನು ಪ್ರೀತಿಸಿ ಮದುವೆಯಾಗಿರುವ ಕಾರಣ ವರದಕ್ಷಿಣೆ ತರುವಂತೆ ಚಾಸಾ-1 ರವರನ್ನು ಪೀಡಿಸಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಆರೋಪಿತರು ಯಾರು ಕೂಡ ಚಾಸಾ-1 ರವರಿಗೆ ಹಿಂಸೆ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-1 ರವರಿಗೆ ಹೊಡೆ-ಬಡಿ ಮಾಡಿರುವುದನ್ನು ನೀವು ಕಣ್ಣಾರೆ ನೋಡಿದಿರಾ ಎಂದರೆ ಅಕ್ಕ-ಪಕ್ಕದಲ್ಲಿ ಮನೆ ಇರುವ ಕಾರಣ ನಾನು ನೋಡಿದ್ದೇನೆ. ಆ ಬಗ್ಗೆ ನೀವು ದೂರುಕೊಡಬಹುದಾಗಿತ್ತಲ್ಲಾ ಎಂದರೆ ಸಣ್ಣ-ಪುಟ್ಟ ಗಲಾಟೆಗೆ ಯಾಕೆ ದೂರು ಕೊಡಬೇಕು ಎಂದು ಸುಮ್ಮನಿದ್ದೆ. ನವೆಂಬರ್ 2023ರಲ್ಲಿ ಘಟನೆ ನಡೆದಿದೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಫೆಬ್ರವರಿ 2024ರಲ್ಲಿ ದೂರು ಕೊಟ್ಟಿದ್ದಿರಿ ಎಂದರೆ ಕರೆದುಕೊಂಡು ಹೋಗುತ್ತಾರೆ ಎಂದು ಕಾದಿದ್ದೆವು. ಆರೋಪಿತರಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.